**ಸಮ್ಮೇಳನದಲ್ಲಿ ಭಾಗವಹಿಸಿ**

**ಲೋಕ ವಿದ್ಯಾ ಜನ ಆಂದೋಲನ**

**(ಜನರ ಜ್ಞಾನದ ಚಳುವಳಿ)**

**ನವೆಂಬರ್ 12–14, 2011 ವಾರ್ಧ ಆಶ್ರಮ, ಸಾರನಾಥ ವಾರಣಾಸಿ, ಇಂಡಿಯಾ**

**ಸಾಮಾಜಿಕ ಚಳುವಳಿಗಳು ಮತ್ತು ಜ್ಞಾನದ ನಿಲುವು**

ಭಾರತದಲ್ಲಿಂದು ಜನರನ್ನು ಅವರ ಭೂಮಿಗಳಿಂದ, ಮನೆಗಳಿಂದ ಮತ್ತವರ ಕಾರ್ಯ ಕ್ಷೇತ್ರಗಳಿಂದ ಸ್ಥಾನಪಲ್ಲಟಗೊಳಿಸಲಾಗುತ್ತಿದೆ. ಇದು ಸಮಾನ ಕಾಳಜಿಯುಳ್ಳ ಮತ್ತು ವಿಶಾಲವಾದ ಒಂದು ಸಾಮಾಜಿಕ ಚಳುವಳಿಯ ಉಗಮಕ್ಕೆ ಕಾರಣವಾಗಿದೆ. ರೈತ ಚಳುಗಳಿಗಳು ರೈತರ ಭೂಮಿಯನ್ನು ವಶಪಡಸಿಕೊಳ್ಳುವಿಕೆ ಮತ್ತು ಒಂದಿಷ್ಟು ಹಣವನ್ನು ಪರಿಹಾರವಾಗಿ ನೀಡುತ್ತಿರುವುದರ ವಿರುದ್ಧ, ಅದಿವಾಸಿ ಮತ್ತು ಸ್ಥಳೀಯ ಸಮುದಾಯಗಳು ಸ್ಥಳೀಯ ಸಂಪನ್ಮೂಲಗಳ ಮೇಲೆ ತಮ್ಮ ನಿಯಂತ್ರಣಕ್ಕಾಗಿ ಮತ್ತು ಪಾರಿಸಾರಿಕ ಹಾಗೂ ಜೈವಿಕ ಸಂಪನ್ಮೂಲಗಳ ನಾಶದ ವಿರುದ್ಧ, ಕೊಳಚೆ ಪ್ರದೇಶದ ಚಳುವಳಿಗಳು ನಾಗರೀಕ ಮತ್ತು ಸಾಮಾಜಿಕ ಅನುಕೂಲತೆಯನ್ನು ಪಡೆಯುವುದಕ್ಕೋಸ್ಕರ, ಬಟ್ಟೆಮಾರುವವರು ಮತ್ತು ಕರಕುಶಲ ಕರ್ಮಿಗಳು ತಮ್ಮ ಸ್ಥಳೀಯ ಮಾರುಕಟ್ಟೆಗಳನ್ನು ವ್ಯವಸ್ಥಿತವಾಗಿ ನಾಶ ಮಾಡಿ ಜಾಗತಿಕ ಮಾರುಕಟ್ಟೆಗೆ ಅವಕಾಶ ಮಾಡಿಕೊಡುತ್ತಿರುವುದರ ವಿರುದ್ಧ ಹೋರಾಡುತ್ತಿದ್ದಾರೆ, ಇವರೆಲ್ಲಾ ಸ್ವತಂತ್ರವಾಗಿ ತಮ್ಮ ಚಳುವಳಿಗಳನ್ನು ಸಂಘಟಿಸಿ, ತಮ್ಮದೇ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೂ ಸಹ ಸ್ಥಾನ ಪಲ್ಲಟ ಮತ್ತು ಒಕ್ಕಲೆಬ್ಬಿಸುತ್ತಿರುವುದು ಈ ಎಲ್ಲಾ ಚಳುವಳಿಗಳ ಸಾಮಾನ್ಯವಾದ ಕಾಳಜಿಯ ವಿಷಯವಾಗಿದೆ. ಈ ಎಲ್ಲಾ ಚಳುವಳಿಯನ್ನು ಒಂದು ಚಳುವಳಿಯನ್ನಾಗಿ ರೂಪಿಸುತ್ತಿದೆ. ಈ ಜನರನ್ನು ಸಂಘಟಿಸುತ್ತಿರುವವರು ಆಳುವವರ ಬಲತ್ಕಾರಯುತ ಕಾನೂನುಗಳನ್ನು ಎದುರಿಸಲು ದಾರಿಗಳನ್ನು ಹುಡುಕುತ್ತಿದ್ದಾರೆ.

ಸ್ಥಾನಪಲ್ಲಟಕ್ಕೆ ಗುರಿಯಾಗುತ್ತಿರುವ ಸಮೂದಾಯಗಳ ಜನರು ಕಾಲೇಜುಗಳಿಗೆ ಹೋದವರಲ್ಲ. ಅವರು ತಮ್ಮ ಹಿರಿಯರಿಂದ, ಸಮುದಾಯಗಳಿಂದ, ಕಾರ್ಯಕ್ಷೇತ್ರಗಳಲ್ಲಿ ನಡೆಸಿದ ಪ್ರಯೋಗಗಳಿಂದ ಮತ್ತು ತಮ್ಮದೇ ಬುದ್ಧಿಮತ್ತೆಯಿಂದ ದಿನ ನಿತ್ಯ ಜೀವನವನ್ನು ನಡೆಸುತ್ತಿರುವವರು. ಇದನ್ನೇ ಲೋಕ ವಿದ್ಯಾ ಎನ್ನುವುದು. ಸ್ಥಾನ ಪಲ್ಲಟವು ಎಂತಹ ಸ್ಥಿತಿಗೆ ಇವರನ್ನು ತಂದಿದೆ ಎಂದರೆ, ಅವರ ಲೋಕ ವಿದ್ಯಾ ಅವನ ಜೀವನಕ್ಕೆ ಉಪಯೋಗಕ್ಕೆ ಬರದಂತೆ ಮಾಡಿದೆ ಮಾತ್ರವಲ್ಲ ಅವರನ್ನು ಅಗ್ಗದ ಕೂಲಿಗಳನ್ನಾಗಿ ಪರಿವರ್ತಿಸಿದೆ. ಲೋಕ ವಿದ್ಯಾವನ್ನು ಅವರ ಜೀವನದಿಂದ ಪ್ರತ್ಯೇಕಿಸಲಾಗುತ್ತಿದೆ. ಯಾವ ಬೆಲೆಯನ್ನು ತೆತ್ತಾದರು ಇಂತಹ ಪ್ರತ್ಯೇಕಿಕರಣದ ವಿರುದ್ಧವಾಗಿ ನಾವಿಂದು ಹೋರಾಡಬೇಕಿದೆ. ವಾಸ್ತವಿಕವಾಗಿ, ಲೋಕ ವಿದ್ಯಾ ಎಂದರೆ ಜನರ ಜ್ಞಾನ, ಕುಶಲತೆ, ಚಿಂತಿಸುವ ಕ್ರಮ, ಮೌಲ್ಯ, ಸಂಘಟನೆಯ ವಿಧಾನಗಳು, ಸೌಂದರ್ಯ ಮತ್ತು ನೈತಿಕ ಸೂಕ್ಷ್ಮಗಳು, ಇದನ್ನೇ ಸಂಕ್ಷಿಪ್ತವಾಗಿ

ಹೇಳುವುದಾರೆ, ಅವರ ಪ್ರಪಂಚ ಜ್ಞಾನವು ಅವರ ಜಗತ್ತಿನ ಭಾಗವಾಗಿದೆ. ಅದುವೇ ಅವರ ಸಾಮರ್ಥ್ಯದ ಮೂಲ ಆಧಾರವಾಗಿದೆ. ಲೋಕ ವಿದ್ಯಾವೇ ಈ ಭಿನ್ನ ಜನರನ್ನು ಒಂದುಗೂಡಿಸಿರುವ ಅಂಶ. ಇದನ್ನು ಇಂದು ಕೀಳಾಗಿ ಕಾಣಲಾಗುತ್ತಿದೆ. ನಾವಿಂದು ವಿಮೋಚನೆಯ ಮಾರ್ಗಗಳು ಜಗತ್ತಿನ ಜ್ಞಾನದ ಮೂಲಕವೇ ಹಾದು ಹೋಗುತ್ತವೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾದುದ್ದಾಗಿದೆ. ಇಂದಿನ ಮಾಹಿತಿಯ ಯುಗದಲ್ಲಿ ಲೋಕ ವಿದ್ಯಾದ ನಿಲುವು ಜನರ ನಿಲುವೇ ಆಗಿದೆ.

**ಲೋಕ ವಿದ್ಯಾ- ಜ್ಞಾನದ ಕರೆ**

ಜಗತ್ತಿನ ಎಲ್ಲಾ ಕಡೆಯ ರೈತ ಮತ್ತು ದೇಸೀಯ ಜನರು ಹೊಸದೊಂದು ಘೋಷಣೆಯ ಭಾವನೆಯಲ್ಲಿದ್ದಾರೆ: ತಮ್ಮದೇ ಆದ ಮಾರ್ಗ ಅಭಿವ್ಯಕ್ತಿಸಿಕೊಳ್ಳುವ, ಸಂಯೋಜಿಸಿಕೊಳ್ಳುವ, ಪ್ರತಿನಿಧಿಸಿಕೊಳ್ಳುವ ಮತ್ತು ತಮಗೆ ಸರಿ ಹೊಂದಿಕೊಳ್ಳುವ ತಮ್ಮದೇ ಆದ ಜ್ಞಾನ, ಮೌಲ್ಯ ನಂಬಿಕೆಯ ವ್ಯವಸ್ಥೆಯೊಳಕ್ಕೆ ಬದುಕುತ್ತೇವೆಂಬುದನ್ನು ಒತ್ತಿ ಹೇಳುತ್ತಿದ್ದಾರೆ. ಈ ಅಂಶವೇ ಜಗತ್ತಿನಾದ್ಯಂತ, ಅಂದರೆ ದಕ್ಷಿಣ ಅಮೇರಿಕ, ಏಷ್ಯಾ ಆಫ್ರಿಕಾ ಇತ್ಯಾದಿಗಳ ಕಡೆ ಈ ಜನರನ್ನು ಹೋರಾಡುವಂತೆ ಮಾಡುತ್ತಿದೆ.

ಇದರರ್ಥವೆಂದರೆ, ರೈತರು ಮತ್ತು ಆದಿವಾಸಿಗಳು, ಮಹಿಳೆಯರು ಮತ್ತು ಕರಕುಶಲ ಕರ್ಮಿಗಳು, ಕಾರ್ಮಿಕರೆಲ್ಲರು ಲೋಕ ವಿದ್ಯಾಕ್ಕೆ ಹಕ್ಕೋತ್ತಾಯ ಮಾಡಬೇಕು. ಇದು ಉಳಿದುಕೊಳ್ಳುವುದಕ್ಕಾಗಿ ಮಾತ್ರ ಹಕ್ಕೊತ್ತಾಯವಲ್ಲ, ಬದಲಿಗೆ ಹೊಸ ಜಗತ್ತಿನ ನಿರ್ಮಾಣಕ್ಕಾಗಿ ಹಕ್ಕೋತ್ತಾಯ. ಈ ಹಕ್ಕೋತ್ತಾಯವು ಬಂಡಾವಾಳಶಾಹಿತ್ವಕ್ಕೆ ಮತ್ತು ವ್ಯಾಪಾರೀಕರಣದ ವಿರುದ್ಧ ನಡೆಸುವ ಕ್ರಾಂತಿಕಾರಕ ಹಕ್ಕೋತ್ತಾಯ. ಇದನ್ನು ಲೋಕ ವಿದ್ಯಾ ಮಾತ್ರ ಮಾಡಬಲ್ಲದು. ಅಷ್ಟು ಮಾತ್ರವಲ್ಲ, ಲೋಕ ವಿದ್ಯಾ ಮಾತ್ರ ಜ್ಞಾನ ಆಧಾರಿತವಾದ, ಸತ್ಯಾಧಾರಿತವಾದ ಸಮಾಜಕ್ಕೆ, ಆರ್ಥಿಕ ಸಮಾನತೆಗೆ ದನಿ ನೀಡಬಲ್ಲದು. ಎಲ್ಲಿಯವರೆಗೆ ಈ ದನಿಯು ಮೊಳಗುವುದಿಲ್ಲವೊ, ಅಲ್ಲಿಯವರಗೆ ತೀವ್ರ ತರವಾದ ಸಾಮಾಜಿಕ ಬದಲಾವಣೆಯ ಪೂರ್ವಗ್ರಹದಲ್ಲೇ ನಾವು ಸೆರೆಯಾಳುಗಳಾಗಿ ಬಂಧಿತರಾಗಿರುತ್ತವೆ. ಲೋಕ ವಿದ್ಯಾದ ಈ ದನಿಯು ಸಾಮಾಜಿಕ, ಆರ್ಥಿಕ, ರಾಜಕೀಯ, ಮತ್ತು ಸಂಸ್ಕೃತಿಯ ವಲಯಗಳಿಗೆ ಹೊಸ ಚಿಂತನೆಯನ್ನು ಹುಟ್ಟುಹಾಕುತ್ತದೆ. ಈ ಪ್ರಕ್ರಿಯೆಗೆ ರೂಪ ಕೊಡುವ ದನಿಯೇ ಲೋಕ ವಿದ್ಯಾ ಜನಾಂದೋಲನದ ಪ್ರಕ್ರಿಯೆ.

**ಲೋಕವಿದ್ಯಾ ಜನಾಂದೋಲನ**

ಲೋಕ ವಿದ್ಯಾವು ಯಾರನ್ನು ಆಧುನಿಕ ಪ್ರಭುತ್ವ, ವೈಜ್ಞಾನಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಕಡೆಗಣಿಸಿದೆಯೋ ಅಂತಹ ಬಹುಸಂಖ್ಯಾತರ ಜ್ಞಾನದ ಚಳುವಳಿ. ವಿಶ್ವವಿದ್ಯಾಲಯಗಳ ಆಚೆ ಜ್ಞಾನದ ಸಮುದ್ರವೇ ಇದೆ. ಇದನ್ನು ಜಗತ್ತಿನ ಬಹುಸಂಖ್ಯಾತರು ಇದನ್ನು ತಮ್ಮಿಂದ ಪರಕೀಯವಾದುದ್ದು ಎಂದು ಭಾವಿಸುವುದಿಲ್ಲ. ಜ್ಞಾನ ಸಮಾಜದಲ್ಲಿ ವಿಶಾಲವಾಗಿ ಹಬ್ಬಿದೆ ಮತ್ತು ಜ್ಞಾನವು ಸಮಾಜದಲ್ಲಿ ವಿಸ್ತಾರವಾಗಿ ಹಬ್ಬಿದೆ ಎನ್ನುವ ವಿಚಾರವು ಕೂಡು ವಿಸ್ತಾರವಾಗಿ ಹಬ್ಬಿದೆ. ಅಂದರೆ ಜನರಿಗೆ ತಿಳಿದಿದೆ, ಮಾತ್ರವಲ್ಲ ತಮಗೆ ತಿಳಿದಿದೆ ಎನ್ನುವುದೂ ಸಹ ಅವರಿಗೆ ಗೊತ್ತಿದೆ. ಈ ಜನರಿಗೆ ಮತ್ತು ಅವರ ಜ್ಞಾನಕ್ಕೆ ಸಮಾಜದಲ್ಲಿ ಗೌರವವಿದೆ. ಸಾರ್ವತ್ರಿಕ ಕ್ಷೇತ್ರದಲ್ಲಿ ಇದಕ್ಕೆ ಗೌರವವಿಲ್ಲ. ಆದ್ದರಿಂದ ಜನರು ಸಾಂಸ್ಕೃತಿಕವಾಗಿ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇದು ಜನರ ಸಂಘಟನೆಗಳೊಂದಿಗೆ ಸ್ಪಷ್ಟವಾದ ಸಂಬಂಧವನ್ನು ಹೊಂದಿಲ್ಲ, ಆದ್ದರಿಂದ ಈ ಜನರು ರಾಜಕೀಯವಾಗಿ ಮಹತ್ವ ಪಡೆದಿಲ್ಲ. ಆದ್ದರಿಂದ ಒಂದು ರಾಜಕೀಯ ಚಳುವಳಿಯು ಅಗತ್ಯವಿದೆ. ಅಲ್ಲಿ ಜನರು ತಮ್ಮ ಜ್ಞಾನದ ಆಧಾರ ಮೇಲೆ ತಮ್ಮನ್ನು ಸಂಘಟಿಸಿಕೊಳ್ಳಲು ಆಸ್ಪದವಿರಬೇಕು. ಅಂತಹ ಒಂದು ಚಳುವಳಿಯೇ ಲೋಕ ವಿದ್ಯಾ ಜನಾ ಆಂದೋಲನ.

ಈ ಸಮ್ಮೇಳನವು ರೈತ, ಮಹಿಳೆ, ಕುಶಲ ಕರ್ಮಿಗಳು, ಆದಿವಾಸಿ, ಸಣ್ಣ ವ್ಯಾಪಾರಿಗಳ ಚಳುವಳಿಗಳನ್ನು ಸಂಘಟಿಸುತ್ತಿರುವ, ಸಂಘಟನಾಕಾರರನ್ನು ಲೋಕ ವಿದ್ಯಾದ ಜ್ಞಾನ ವೇದಿಕೆಗೆ ತರುವ ಪ್ರಯತ್ನವಾಗಿದೆ. ಈ ವೇದಿಕೆ ಮೂಲಕ ಲೋಕ ವಿದ್ಯಾದಲ್ಲಿ ಸಮಸ್ಯೆಗೆ ಪರಿಹಾರವಿದೆ ಎನ್ನುವನ್ನು ಸೂಚಿಸುವುದಾಗಿರುತ್ತದೆ.

**ಜಗತ್ತಿನ ಎಲ್ಲಾ ಕಡೆ ಜ್ಞಾನದ ಚಳುವಳಿಗಳು**

ಜಗತ್ತು ಹೊಸ ರೀತಿಯ, ಅಂದರೆ ಸಂಪೂರ್ಣವಾಗಿ ಹೊಸ ರಾಜಕೀಯ ಕಲ್ಪನೆಯನ್ನು ಹೊಂದಿರುವ ಜನರ ಜ್ಞಾನದ ಚಳುವಳಿಗೆ ಸಾಕ್ಷಿಯಾಗುತ್ತಿದೆ. ಇದರ ಕಿಡಿಗಳು ಭಾರತದಲ್ಲಿ ಲೋಕ ವಿದ್ಯಾ ಎಂದಿದ್ದರೆ, ಅದು ಬಲೋವಿಯದಲ್ಲಿ ರೈಟ್ ಫಾರ್ ಅರ್ತ್ ಮೂಮೆಂಟ್, ಇಸಿಡೋರ್‌ನಲ್ಲಿ ರೈಟ್ ಫಾರ್ ಅರ್ತ್, ಕಾಗ್‌ನಿಟೀವ್ ಕ್ಯಾಪಿಟಲಿಸಂ ಐಡಿಯಾ ಆಫ್ ನಾಲೆಡ್ಜ್ ಲಿಬರಲ್ ಇನ್ ಯುರೋಪ್ ಅಂಡ್ ಅಮೇರಿಕಾಗಳಾಗಿ ಕೆಲಸ ನಿರ್ವಹಿಸುತ್ತಿವೆ. ರಾಜಕೀಯಕ್ಕೆ ಪರಿಚಯವೇ ಇಲ್ಲದ ಚಳುವಳಿಗಳ ಸೂಚನೆಗಳಾಗಿವೆ, ಇಲ್ಲಿನ ಜನರೆಲ್ಲಾ ತಮ್ಮ ಜ್ಞಾನ, ನಂಬಿಕೆ ಮತ್ತು ತಿಳುವಳಿಕೆಯು ಯಾವುದರಲ್ಲೂ ಕಡಿಮೆ ಎಂದು ಭಾವಿಸುವ ಕೀಳರಿಮೆಯನ್ನು ಹೊಂದಿಲ್ಲ. ಅಲ್ಲದೇ ಕಳೆದ ಶತಮಾನಗಳಿಂದ ಜನರ ಮೇಲೆ ಮತ್ತು ಪ್ರಕೃತಿಯ ಮೇಲೆ ನಡೆಯುತ್ತಿರುವ ಹಲ್ಲೆಗಳ ಬಗೆಗೆ ಮತ್ತು ಇದನ್ನು ಡಿಜಿಟಲ್ ಕ್ಷೇತ್ರವು ಹಲವು ರೀತಿಯಲ್ಲಿ ಹೆಚ್ಚಿಸುತ್ತಿರುವುದರ ಬಗೆಗೂ ಒಂದು ಸ್ಪಷ್ಟ ತಿಳುವಳಿಕೆಯು ಮೂಡಿದೆ. ಇದನ್ನು ಯಾರು ಈ ಡಿಜಟಲ್ ವಲಯದ ಒಳಗೆ ಸಂಪೂರ್ಣವಾಗಿ ಸೇರಿ ಹೋಗಿಲ್ಲವೋ ಅವರಿಂದ ನಿವಾರಿಸಲು ಸಾಧ್ಯವೆಂದು ಸಹ ಅರ್ಥವಾಗುತ್ತಿದೆ.

ಲೋಕ ವಿದ್ಯಾ ಜನಾಂದೋಲನವು ವಾದಿಸುವಂತೆ, ವಿಶ್ವಾದ್ಯಂತ ಇರುವಂತಹ ಇಂತಹ ಎಲ್ಲಾ ಚಳುವಳಿಗಳು ಜಗತ್ತಿನಾದ್ಯಂತ ಒಂದು ಜನರ ಜ್ಞಾನದ ಚಳುವಳಿ, ಸಮಾಜದಲ್ಲಿ ಜ್ಞಾನದ ಚಳುವಳಿಗಳನ್ನು ಕಟ್ಟಲು ವೇದಿಕೆಯನ್ನು ನಿರ್ಮಿಸಿಕೊಳ್ಳಬೇಕು.

## ಲೋಕ ವಿದ್ಯಾ ಜನಾಂದೋಲನದ ಮೊದಲ ಅಂತರಾಷ್ಟ್ರೀಯ ಸಮ್ಮೇಳನ

ಸ್ಥಳ: ವಾರ್ಧ ಆಶ್ರಮ, ಸಾರನಾಥ, ವಾರಣಾಸಿ, ಭಾರತ

ದಿನಾಂಕ: ನವೆಂಬರ್ 12–14, 2011

ಗೋಷ್ಠಿಗಳು: ಮೊದಲ ಎರಡು ದಿನ ಕೆಳಗಿನ ಮೂರು ವಿಷಯಗಳ ಮೇಲೆ ಗೋಷ್ಠಿಗಳು ಜರುಗುತ್ತವೆ.

1. ಲೋಕ ವಿದ್ಯಾ ಮತ್ತು ಜನರ ಜ್ಞಾನದ ಕಲ್ಪನೆ
2. ಇಂತಹ ಒಂದು ಕಲ್ಪನೆಯನ್ನು ಅಂತರ್ಗತವಾಗಿರುವ ಮತ್ತು ಅದಕ್ಕೆ ಆಸ್ಪದ ಕೊಟ್ಟಿರುವ ಚಳುವಳಿಗಳು
3. ಮತ್ತು ಲೋಕ ವಿದ್ಯಾ ಜನಾಂದೋಲವನ್ನು ಸಂಘಟಿಸುವ ಮಾರ್ಗೋಪಾಯಗಳು

ಮೂರನೆ ದಿನ ಲೋಕ ವಿದ್ಯಾದಲ್ಲಿ ಕಲೆ, ಮಾಧ್ಯಮ, ತತ್ವಜ್ಞಾನ ಮತ್ತು ಭಾಷೆಗಳನ್ನು ಬಳಸಿಕೊಳ್ಳುವುದರ ಕುರಿತು ಚರ್ಚಿಸಲಾಗುವುದು. ಯಾರು ಲೋಕ ವಿದ್ಯಾದ ವಿಚಾರದಡಿಯಲ್ಲಿ ಕೆಲಸ ಮಾಡುತ್ತಿಲ್ಲವೋ ಅಂತಹವರು ತಮ್ಮ ವಿಚಾರ, ದೃಷ್ಟಿಕೋನಗಳನ್ನು ಜನರ ಜ್ಞಾನದ ಚಳುವಳಿಯಲ್ಲಿ ರೂಪಿಸಿಕೊಳ್ಳಬಹುದು.

ಈ ಸಮ್ಮೇಳನದಲ್ಲಿ ಭಾಗವಹಿಸುವವರು ವಾರ್ಧಕ್ಕೆ ಬರುವ ವೆಚ್ಚವನ್ನು ತಾವೇ ಭರಿಸಿಕೊಳ್ಳಬೇಕಾಗುವುದು. ಅಲ್ಲಿ ಉಳಿದುಕೊಳ್ಳುವ ಮತ್ತು ಊಟದ ವ್ಯವಸ್ಥೆಯನ್ನು ಸ್ಥಳೀಯವಾಗಿ ವಾರ್ಧ ಆಶ್ರಮವೇ ನೋಡಿಕೊಳ್ಳುತ್ತದೆ.

**ಸಂಪರ್ಕಕ್ಕೆ:**

ಸುನೀಲ್ ಸಹಸ್ರ ಬುದ್ಧೆ : ವರಣಾಸಿ budhey@gmail.com +91-9839275124

ಬಿ. ಕೃಷ್ಣ ರಾಜಲು : ಹೈದ್ರಾಬಾದ್ kkbandi@gmail.com +91-9866139091

ಅಮೀತ್ ಬೊಸ್ಲೆ : ಬೋಸ್ಟನ್ abasole@gmail.com +1-6176867437

ನಿಮ್ಮ ಬರುವಿಕೆಗೆ ಎದುರು ನೋಡುತ್ತಿದ್ದೇವೆ.

ವಾರ್ಧ ಆಶ್ರಮ,

ಸಾರನಾಥ

ವಾರಣಾಸಿ, ಇಂಡಿಯಾ